ದಿನಾಂಕ : 18.11.2021

ಓ.ಎಸ್ ನಂ.412/2014 ರಲ್ಲಿ
ಪಿ.ಡಬ್ಲ್ಯೂ-1(ವೆಂಕಟೇಶ್)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 8 ಮತ್ತು 10 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಹೆಚ್ ವಕೀಲರಿಂದಃ

ನನ್ನ ಜನ್ಮದಿನಾಂಕ ನನಗೆ ಗೊತ್ತಿಲ್ಲ. ಪೂಜ್ಞಾಭೋವಿ ನನ್ನ ತಾತ. ನನ್ನ ತಾತ ಪೂಜ್ಞಾಭೋವಿ ತೀರಿಹೋಗಿ ಎಷ್ಟು ವರ್ಷಗಳಾಗಿವೆ ಎಂದು ನನಗೆ ಗೊತ್ತಿಲ್ಲ. ಅವರು ಮೃತಪಟ್ಟ ಬಗ್ಗೆ ಮರಣ ಸಮರ್ಥನಾ ಪತ್ರವಿಲ್ಲ. ಪೂಜ್ಞಾಭೋವಿರವರ ಪತ್ನಿ ಮಕ್ಕಳು ಎಲ್ಲರೂ ತೀರಿಹೋಗಿದ್ದಾರೆ ಎಂದರೆ ಸರಿ, ಅವರ ಮರಣಾ ಸಮರ್ಥನಾ ಪತ್ರಗಳಿಲ್ಲ ಎಂದರೆ ನನ್ನ ತಂದೆಯದ್ದು ಇದೆ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ತಂದೆ ಯಾವಾಗ ತೀರಿಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಅವರ ಮರಣಾ ಸಮರ್ಥನಾ ಪತ್ರವನ್ನು ನಾನು ಹಾಜರು ಮಾಡಿಲ್ಲ. ನನ್ನ ತಾತನಿಗೆ ಆಸ್ತಿ ಮಂಜೂರಾಗಿತ್ತು ಎನ್ನುವ ಬಗ್ಗೆ ನಾನು ಮೂಲ ಮಂಜೂರಾತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಹಾಜರು ಮಾಡಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಪಿ-2 ನಾನು ಹಾಜರು ಮಾಡಿದ ಮಂಜೂರಾತಿ ಪತ್ರ ಎಂದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-2 ನ್ನು ನಾನು 2010 ನೇ ಸಾಲಿನಲ್ಲಿ ಪಡೆದುಕೊಂಡಿದ್ದೆ ಎಂದರೆ ಸಾಕ್ಷಿಯು ದಿನಾಂಕದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ಮಂಜೂರಾತಿ ಪತ್ರವನ್ನು ಆಧಾರವಾಗಿಟ್ಟುಕೊಂಡು ಇದೇ ನ್ಯಾಯಾಲಯದಲ್ಲಿ ಅಸಲುದಾವೆ ಸಂಖ್ಯೆ 424/2007 ನಡೆದಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಅಸಲುದಾವೆ ಸಂಖ್ಯೆ 424/2007 ನ್ನು ಪುಟ್ಟೀರ ಎಂಬುವವರು ವಿಭಾಗ ಕೋರಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ : 18.11.2021 ಓ.ಎಸ್ ನಂ.412/2014 ರಲ್ಲಿ
ಪಿ.ಡಬ್ಲ್ಯೂ-1(ವೆಂಕಟೇಶ್)

ಸರ್ವೇ ನಂ.216/2 ರ ಸ್ವತ್ತನ್ನು ಯಾರು ಯಾರಿಗೆ ಮಾರಾಟ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ ಆದರೆ ನಾವೇ ಸದರಿ ಸ್ವತ್ತಿನ ಅನುಭೋಗದಲ್ಲಿದ್ದೇವೆ. ಎಂ.ಆರ್.108/1996-97 ರ ಪ್ರಕಾರ 8 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿ, 1996-97 ರಿಂದ 8 ನೇ ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿ ಬರುತ್ತಿದೆ ಎನ್ನುವ ಬಗ್ಗೆ ಇದುವರೆಗೂ ನಾನು ದಾಖಲೆಗಳನ್ನು ಪಡೆದುಕೊಂಡಿಲ್ಲ ಎಂದರೆ ಪಡೆದುಕೊಂಡಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ಖಾತೆಯನ್ನು ಎ.ಸಿ. ನ್ಯಾಯಾಲಯದಲ್ಲಿ ನಾವು ಪ್ರಶ್ನಿಸಿಲ್ಲ. ನಾನು ಹಾಜರು ಮಾಡಿದ ವಂಶವೃಕ್ಷದಲ್ಲಿರುವ ಎಲ್ಲಾ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಮಾಡಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ನನಗೆ ದೊಡ್ಡನರಸಿಂಹಯ್ಯನವರ ಹೆಂಡತಿ ಚಿಕ್ಕತಾಯಮ್ಮ ಹಾಗೂ ಅವರ ಮಕ್ಕಳ ಪರಿಚಯವಿದೆ, ಸಾಕ್ಷಿಯು ಚಿಕ್ಕತಾಯಮ್ಮ ನನ್ನ ದೊಡ್ಡಮ್ಮ ಎಂದು ನುಡಿಯುತ್ತಾರೆ. ಚಿಕ್ಕತಾಯಮ್ಮ ಮತ್ತು ಅವರ ಮಕ್ಕಳು ದಿನಾಂಕ 23.12.1998 ರಂದು ಸರ್ವೇ ನಂ.216/2 ರಲ್ಲಿ 3 ಎಕೆರೆ 20 ಗುಂಟೆ ಜಮೀನನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.216/2 ರಲ್ಲಿ 3 ಎಕರೆ 20 ಗುಂಟೆ ಜಮೀನಿನಲ್ಲಿ 8 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಪೂರ್ತಿ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ನಾವು ಸ್ವಾಧೀನದಲ್ಲಿರುವ ಬಗ್ಗೆ ದಾಖಲೆಗಳಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. 8 ನೇ ಪ್ರತಿವಾದಿಗೆ ಸರ್ವೇ ನಂ.216/2 ರಲ್ಲಿ 3 ಎಕರೆ 20 ಗುಂಟೆ ಜಮೀನನ್ನು ಚಿಕ್ಕತಾಯಮ್ಮ ಮತ್ತು

ಅವರ ಮಕ್ಕಳು ಅವರ ಕುಟುಂಬದ ಅವಶ್ಯಕತೆಗೋಸ್ಕರ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಸಲುದಾವೆ ಸಂಖ್ಯೆ 424/2007 ದಿನಾಂಕ 20.12.2014 ರಂದು ವಜಾಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ವಜಾಗೊಂಡ ಕಾರಣ ನಾವು ಪುನಃ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ, ಸಾಕ್ಷಿಯು ನಮ್ಮ ತಾತನ ಆಸ್ತಿಯ ಬಗ್ಗೆ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. 10 ನೇ ಪ್ರತಿವಾದಿಯನ್ನು ನಂತರ ದಾವೆಯಲ್ಲಿ ಯಾಕೆ ಸೇರಿಸಿದ್ದೆವು ಎಂದರೆ ಸಾಕ್ಷಿಯು ಕೇಸು ನಡೆಯುತ್ತಿದ್ದಂತೆ ವೀರಯ್ಯ ತನ್ನ ಮಗ ಶಿವರಾಜು ಅಂದರೆ 10 ನೇ ಪ್ರತಿವಾದಿಯ ಹೆಸರಿನಲ್ಲಿ ವಿಲ್ ಮಾಡಿದ್ದರು ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿ 10 ನೇ ಪ್ರತಿವಾದಿಯ ಹೆಸರಿಗೆ ಯಾವ ದಾಖಲೆ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಮೊದಲಿಗೆ ವಿಲ್ ಎಂದು ನುಡಿದು, ನಂತರ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ದಿನಾಂಕ 30.12.2015 ರಂದು 8 ನೇ ಪ್ರತಿವಾದಿ 10 ನೇ ಪ್ರತಿವಾದಿಯ ಹೆಸರಿಗೆ ದಾನಪತ್ರ ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ 10 ನೇ ಪ್ರತಿವಾದಿಯ ಹೆಸರಿಗೆ ಆದ ದಾನಪತ್ರವನ್ನು ವಜಾ ಮಾಡಿ ಎಂದು ನಾನು ಪರಿಹಾರ ಕೋರಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಈಗ 40 ವರ್ಷ ವಯಸ್ಸು. ನಾನು ಸೂಕ್ತ ಅವಧಿಯಲ್ಲಿ ದಾವೆ ಹೂಡಿಲ್ಲ ಎಂದರೆ ಸಾಕ್ಷಿಯು ಆಗ ಅಷ್ಟು ತಿಳುವಳಿಕೆ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತನಿಗೆ 8 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನನ್ನು ಹೊರತುಪಡಿಸಿ ಅದೇ ಸರ್ವೇ ನಂಬರ್‌ನಲ್ಲಿ ಹಾಗೂ ಬೇರೆ ಸರ್ವೇ ನಂಬರ್‌ಗಳಲ್ಲಿ ಬೇರೆ ಜಮೀನುಗಳಿವೆ ಮತ್ತು ಮನೆಗಳಿವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪನ ಹೆಸರಿನಲ್ಲಿರುವ ಬೇರೆ

ದಿನಾಂಕ ಃ 18.11.2021 ಓ.ಎಸ್ ನಂ.412/2014 ರಲ್ಲಿ
ಪಿ.ಡಬ್ಲ್ಯೂ-1(ವೆಂಕಟೇಶ್)

ಮನೆಗಳು ಮತ್ತು ನಮ್ಮ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.